ಶ್ರೀ ಕೆ. ಆರ್. ಶ್ರೀನಿವಾನಲುನಾಯ್ಡು.—ಕೊಳಚೆ ಪ್ರದೇಶ ಈಗ ಬೆಳೆಯುತ್ತಿದೆ. ಅದನ್ನು ತಡೆಗಟ್ಟಲು ಯೋಚನೆ ಮಾಡಲಾಗಿದೆಯೇ ? ಆ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಕೊಳಚೆ ಪ್ರದೇಶವನ್ನು ನಿರ್ಮೂಲಮಾಡಲು ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ರಚಿಸಬೇಕೆಂದು ಯೋಚನೆಮಾಡಿದ್ದೇವೆ. ಮತ್ತು ಶೀಘ್ರವಾಗಿ ಈ ಕೆಲಸವನ್ನು ಕಾರ್ಯಗತಮಾಡಲು ಒಂದು ಸಮಿತಿ ಮಾಡಬೇಕೆಂಬ ಯೋಚನೆ ಇದೆ. ಈ ಸಂಬಂಧವಾಗಿ ಒಂದು ಬಿಲ್ಲನ್ನು ತಂದು ಬೋರ್ಡನ್ನು ರಚಿಸಬೇಕೆಂಬ ಅಭಿಪ್ರಾಯವಿದೆ. ಇದರಿಂದ ಶೀಘ್ರವಾಗಿ ಸದಸ್ಯರ ಕಳವಳವೇನಿದೆ ಅದು ಪರಿಹಾರವಾಗಬಹುದು.

Road Works in Dharwar District

46. **Sri B. G. BANAKAR** (Hirekerur).—

Will the Minister for Revenue be pleased to state :—

(*a*) the road works sanctioned under the scarcity head in Dharwar District ;

(*b*) the number of them that are brought to a safe stage ;

(*c*) when the Government propose to bring them to a safe stage ?

Sri N. HUTCHAMASTHY GOWDA (Minister for Revenue).—

(*a*) Particulars of road works sanctioned and executed during 1971–72 are found in the statement appended.

(*b*) All the road works taken up have been completed and brought to a safe stage.

(*c*) Does not arise.

STATEMENT

Sl. No.	Name of the Taluka	Name of Road work sanctioned and executed during 1971-72
1	2	3
1	Dharwar	(1) Construction of Road from Amminbhavi to Chandanamatti.
		(2) do from Maradgi to Bairidevarkoppa.
2	Hubli	(3) do Koliwad-Malligawad Road KMI.
		(4) Metalling of Sulla-Bengeri Road
3	Navalgund	(5) Improvement to Road Saidapur-Kondikop Railway Station K. M. I.
		do K. M. No. II
		(6) Improvement to Road Naganur-Gudisagar K. M. No. I.
4	Ranebennur	(7) Improvement to Halageri-Benakankonda Road.
5	Byadgi	(8) Improvement to Kurdakodihalli-Motebennur Road.
6	Hirekerur	(9) Kod-Chikkamattur Road. Ramathirtha-Chapparadahalli, Yamminganur, Sorab Taluka Border. Basarihalli to Kelagonda, Yettinhalli-Maralli Road.
7	Gadag	(10) Improvements to Beladhadi-Naganur-Kalasapur Road.
		(11) do Kotaumachigi-Timmapur Road.
		(12) do Haralapur-Kotaumachigi Road.
		(13) do Gadag-Sambapur Road
		(14) do Gujjar Tank Join Pala Badami Road
		(15) do Soratur-Mulagund Road.

1	2		3	
		(16)	Improvements to Asundi	
		(17)	do	Advisomapur to Advisomapur Tanda.
			do	K. M. No. II
			do	K. M. No. III
		(18)	do	Hombal to Belahold Road.
		(19)	do	Kotaumachigi-Haralapur Road No. 10.
			do	K. M. No. 11
8	Mundargi	(20)	Improvement to Sirur-Harlapur Road incomplete portion in first 2 K. Ms. and additional 3 K. Ms.	
9	Nargund	(21)	Improvement to Achamatti Cross to Chikkanaragund Road.	
		(22)	do	Chikkanaragund Cross to Sankdal
		(23)	do	Kalakeri-Kanakihal Road
		(24)	do	Navalgund Amargol in K. M. No. 7 *via* Banahatti-Muganur Road
		(25)	do	Chikkanaragund-Sankdal approach road K. M. No. 5
10	Ron	(26)	Improvement to Gajendragad–Elaburga Road K. M. Nos. 1 and 2	
			do	K. M. No. 3.
		(27)	do	Asuti to Hole–Alur Road K. M. No. 2.
			do	K. M. No. 3
		(28)	do	Abbigeri-Yerebeleri-Karadgi Road K. M. Nos. 1 and 2.
		(29)	do	Bevinakatti-Malagatti road *via* Lakkalkatti K. Nos. 1 and 2

		(30)	do Kuntoji-Jigeri Road K. M. No. 1 do 2, 3, 4.
		(31)	Improvement to Road from Itagi Jaggalakanvi *via* Mushigeri K. No. 10 K. M. No. 11 do 12 do 13
11	Shirahatti	(32)	Improvement to Itagi–Sasarwad Road.
		(33)	do Bellatti–Konchigeri Road.
		(34)	do Bannikopa–Machanhalli from Majjur Varavi.
		(35)	do Gonal Shiggali.
		(36)	do Hebbal–Talali–Sasarwad Road K. M. Nos. 1 to 2 do 3. do 4.
		(37)	do Shiggali-Hesarur Road K. M. Nos. 1 to 2
		(38)	Shirahatti-Venkatapur Road K. M. No. 1 to 3.
		(39)	do Magadi–Yarebudihal Road K. M. Nos. 1 and 2
		(40)	Formation of Shirahatti–Kadakol K. M. No. 1 do 2 do 3 do 4
12	Hanagal	(41)	Improvement to Kalakeri-Hireullal Road K. M. No. 1.
13	Savanur	(42)	Improvement to Savanur–Huralikoppa Road K. M. No. 1. do 2 do 3 do 4 do 4/0 to 5.30

1	2	3
	(43)	Improvements to Bairapur to Handiganur K. M. No. 1.
	(44) do	Ichhangi-Hiremaralihalli Road K. M. No. 1.
		do 2
		do 3
		do 4
		do 5
	(45)	Improvement to Siddapur to Yellapur Road K. M. No. 1
		do 2
	(46) do	Hesarur Doddur Road K. M. No. 1
		do 2
	(47)	Construction of Road from Basankop to Santisiggali up to Taluka border K. M. No. 1
		do 2
	(48)	Construction of Road from Kadakol to Bairapur K. M. No. 1.
		do 2.

ಶ್ರೀ ಬಿ. ಜಿ. ಬಣಕಾರ್.—ಧಾರವಾಡ ಜಿಲ್ಲೆಯಲ್ಲಿ ಕೈಕೊಂಡ ಎಲ್ಲ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅವುಗಳನ್ನು ಸುರಕ್ಷಿತವಾದ ಹಂತಕ್ಕೆ ತರಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಆದರೆ ಸೇತುವೆ, ಕಲ್ವರ್ಟ ಮುಂತಾದುವುಗಳು ಸರಿಯಾಗಿಲ್ಲದಿರುವುದರಿಂದ ಸಂಚಾರಕ್ಕೆ ಆಗಾಗ್ಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಷಾಮ ನಿವಾರಣಾ ನಿಧಿ ಮೂಲಕ ಕೆಲಸ ಮಾಡುವಾಗ ಸೇತುವೆ ದುರಸ್ತು ಮುಂತಾದ ಎಲ್ಲಾ ರಸ್ತೆ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಮಟ್ಟ ಕಾಮಗಾರಿ ಮಾತ್ರ ಮಾಡಲಾಗಿದೆ. ಕೆಲವು ಭಾಗದಲ್ಲಿ ಜಲ್ಲಿ ಕೂಡ ಹಾಕಲಾಗಿದೆ. ಸೇತುವೆ ವಗೈರೆ ಕೆಲಸವನ್ನು ಎಂಜಿನಿಯರಿಂಗ್ ಇಲಾಖೆ ತೆಗೆದುಕೊಳ್ಳಬೇಕು.

1-30. P.M.

ಶ್ರೀ ಬಿ. ಜಿ. ಬಣಕಾರ್.—ಹಾಗಿದ್ದರೆ ಸರ್ಕಾರದವರು ತೀವ್ರವಾಗಿ ಈ ರೋಡುಗಳನ್ನು ರೋಕೋಪಯೋಗಿ ಶಾಖೆಗೆ ಟ್ರಾನ್ಸ್‌ಫರ್ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಈ ವಿಷಯದ ಬಗ್ಗೆ ಹೇಳಿದ್ದಾರೆ. ಯಾವ ಯಾವ ರಸ್ತೆಗಳನ್ನು ಇಂಜಿನಿಯರಿಂಗ್ ಇಲಾಖೆಗೆ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಬಂದಾಗ ಅಂತಹ ಸಂದರ್ಭದಲ್ಲಿ ಇದನ್ನು ಪರ್ಯಾಲೋಚನೆ ಮಾಡಬಹುದು.

ಶ್ರೀ ಗೋಪೀನಾಥ್ ಆರ್. ನಾಂದ್ರ.—ಧಾರವಾಡ ಮತ್ತು ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್, ಮುಂಡಗಿ, ರಾಣೆಬೆನ್ನೂರು, ಹಾವೇರಿ ಮತ್ತು ರೋಣ್ ಈ ಸ್ಥಳಗಳಲ್ಲಿ ಸ್ವಲ್ಪ ಹಣ ಖರ್ಚು ಮಾಡಿ 1 ಕಿಲೋಮೀಟರ್, 2 ಕಿಲೋಮೀಟರ್ ಕೆಲಸ ಮಾಡಿದ್ದೀರಿ. ಇಲ್ಲಿ ಕೆಲಸಗಳು ಅಪೂರ್ಣವಾಗಿವೆ. ಇದಕ್ಕೆ ಕಾರಣ ಈ ಕೆಲಸಗಳಿಗೆ ಸಾಕಷ್ಟು ಹಣ ಖರ್ಚು ಮಾಡುವುದಕ್ಕೆ ಕ್ಷಾಮ ಪರಿಹಾರ ನಿಧಿಯಲ್ಲಿ ಹಣ ಇಲ್ಲವೇ ? ಇಲ್ಲದೇ ಹೋದರೆ ಬೇರೆ ಯಾವುದಾದರೂ ರೀತಿಯಲ್ಲಿ ಹಣ ಒದಗಿಸಿ ಅಪೂರ್ಣವಾಗಿರುವ ಕೆಲಸವನ್ನು ಪೂರ್ಣಗೊಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಯಲ್ಲಿರತಕ್ಕಂಥಾದ್ದು ಕ್ಷಾಮ ಪರಿಹಾರ ಬಾಬಿನ ಮೇರೆಗೆ ಧಾರವಾಡ ಜಿಲ್ಲೆಯಲ್ಲಿ ಮಂಜೂರ್ಮಾಡಲಾದ ರಸ್ತೆ ಕಾಮಗಾರಿಗಳಾವುವು ಅಂತ ಇದೆ. ಆದುದರಿಂದ ಈ ಜಿಲ್ಲೆಗೆ ಸಂಬಂಧಪಟ್ಟಂತೆ ಕೋಳಿವಾಡ್, ಮುಂಡಗಿ, ರಾಣಿಬೆನ್ನೂರು ಈ ತಾಲ್ಲೂಕುಗಳಲ್ಲಿ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಿಂದ ಕೆಲಸಗಳು ನಡೆಯುತ್ತಾ ಇದೆ. ಇದಕ್ಕೆ 1971-72ನೇ ಸಾಲಿನಲ್ಲಿ 24,36,500 ರೂಪಾಯಿ ಹಣ ಒದಗಿಸಲಾಗಿತ್ತು. ಅದರಲ್ಲಿ ಮಾರ್ಚ್ ಅಖೈರ್ ಒಳಗೆ 12 ಲಕ್ಷ 50 ಸಾವಿರ ರೂಪಾಯಿ ಖರ್ಚಾಗಿದೆ ಇದರ ಜೊತೆಗೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು, ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಬೇರೆ 95 ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಹೀಗೆ ನಾನಾ ಇಲಾಖೆಗಳಿಂದ ಕೆಲಸಗಳು ಆಗುತ್ತಾ ಇವೆ. ಮಾನ್ಯ ಸದಸ್ಯರು ಹೇಳಿದಂತೆ ಇನ್ನೂ ಹೆಚ್ಚು ಕಾಮಗಾರಿ ಕೆಲಸಗಳು ಆಗಬೇಕಾದರೆ ಇಂಜಿನಿಯರಿಂಗ್ ಇಲಾಖೆಯಿಂದ ಆಗಬೇಕು. ಆದುದರಿಂದ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಬೇಕೋ ಅಷ್ಟನ್ನು ಒದಗಿಸಿ ಅಪೂರ್ಣವಾಗಿರುವ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಗೋಪೀನಾಥ್ ಆರ್. ನಾಂದ್ರ.—ಧಾರವಾಡ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ನಿಧಿಯಿಂದ ಆಗಿರತಕ್ಕಂಥ ಕೆಲಸಗಳು ಅಪೂರ್ಣವಾಗಿ ಉಳಿದಿವೆ. ಇವುಗಳನ್ನು ಪೂರ್ಣಗೊಳಿಸುವುದಕ್ಕೆ ಧಾರವಾಡ ಜಿಲ್ಲೆಯಲ್ಲಿ ಏನೇನು ಕ್ರಮ ತೆಗೆದುಕೊಳ್ಳುತ್ತೀರೋ, ಅದೇರೀತಿ ಎಲ್ಲಾ ಜಿಲ್ಲೆಗಳಲ್ಲೂ ಅಪೂರ್ಣವಾಗಿರುವ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಶೀಘ್ರ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಯಾವ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ನಿಧಿಗೆಂದು ಹಣ ಒದಗಿಸುತ್ತಾರೋ ಆ ಹಣದಿಂದಲೇ ಆಯಾಯ ಜಿಲ್ಲೆಗಳಲ್ಲಿ ಆ ಕೆಲಸಗಳು ಆಗಬೇಕು. ಎಲ್ಲಾ ಜಿಲ್ಲೆಗಳಲ್ಲೂ ಕೂಡ ಕ್ಷಾಮ ಪರಿಹಾರ ನಿಧಿಯಿಂದ ಹಣವನ್ನು ಒದಗಿಸುವುದಕ್ಕಾಗುವುದಿಲ್ಲ. ಬೇರೆ ಬೇರೆ ಜಿಲ್ಲೆಗಳಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಬೇರೆ ರೀತಿಯಿಂದ ಆ ಹಣವನ್ನು ಒದಗಿಸಿ ಕೆಲಸ ಮಾಡಬೇಕು. ಅಂದರೆ ಇಂಜಿನಿಯರಿಂಗ್ ಇಲಾಖಾ ಮುಖಾಂತರವಾಗಲೀ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂ ಮುಖಾಂತರವಾಗಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ವಿ. ಎನ್. ಪಾಟೀರ್.—ಮಾನ್ಯ ಮಂತ್ರಿಗಳು ಕ್ಷಾಮ ಪರಿಹಾರ ನಿಧಿಯಿಂದ ಕೆಲವು ಜಿಲ್ಲೆಗಳಲ್ಲಿ ಕೆಲಸಗಳನ್ನು ಮಾಡಿಸುತ್ತಾ ಇದ್ದಾರೆ. ನಾನು ಕೇಳುವುದು ಏನೆಂದರೆ ನಮ್ಮ ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ಮಳೆ ಇಲ್ಲದೇ ಇರುವುದರಿಂದ, ನಮ್ಮ ಡಿಸ್ಟ್ರಿಕ್ಟ್‌ಗೆ ಕ್ಷಾಮ ಬಂದರೆ ನಿವಾರಣೆ ಮಾಡುವುದಕ್ಕೆ ಕ್ಷಾಮ ಪರಿಹಾರನಿಧಿಯಿಂದ ರೋಡು ಕೆಲಸ ತೆಗೆದುಕೊಳ್ಳುವ ಬದಲಾಗಿ ಪಿಕಅಪ್ಸ್ ಗೋಕಟ್ಟೆ ಮತ್ತು ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವುದಕ್ಕೆ ಅಶ್ವಾಸನೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆ ಇರುವುದು ಧಾರವಾಡ ಜಿಲ್ಲೆಯಲ್ಲಿ ಎಷ್ಟೆಷು ರಸ್ತೆಗಳನ್ನು ಕ್ಷಾಮ ಪರಿಹಾರ ಕಾರ್ಯಕ್ರಮದಲ್ಲಿ ಸೇರಿಸಿತ್ತು ಅಂತ ಇದೆ. ಕ್ಷಾಮ ಪರಿಹಾರ ಕಾರ್ಯವನ್ನು ಯಾವ ಯಾವ ರೀತಿ ಮಾಡಬೇಕು ಅಂತ ಈ ಕಾರ್ಯ ಕ್ರಮದಲ್ಲಿ ಇಲ್ಲ. ಆದುದರಿಂದ ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಬಿ. ರಾಘುಸ್ವಾಮಿ.—ಯಾವ ಯಾವ ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಯಲ್ಲಿ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ನೀವು ಕ್ಷಾಮ ಪರಿಹಾರ ನಿಧಿಯಿಂದ ಕೆಲವು ರಸ್ತೆಗಳನ್ನು ಸರಿ ಮಾಡುವುದಕ್ಕೆ ಹಣ ಒದಗಿಸುತ್ತಾ ಇದ್ದಿರಿ. ಈಗ ಕ್ಷಾಮ ಪರಿಹಾರ ನಿಧಿಯಿಂದ ಹಣ ಕೊಡುತ್ತಾ ಇಲ್ಲ. ಈಗ ನೀವು ಓವರ್ ಡ್ರಾಫ್ಟ್‌ನ್ನು ಕ್ಲೋಸ್ ಮಾಡುವುದಕ್ಕೋಸ್ಕರ ಈ ಕ್ಷಾಮ ಪರಿಹಾರದ ನಿಧಿಯನ್ನೆಲ್ಲಾ ಕ್ಲೋಸ್ ಮಾಡಿ ಅಪೂರ್ಣವಾಗಿರುವ ಕೆಲಸಗಳನ್ನು ತೆಗೆದುಕೊಂಡಿಲ್ಲ ಅಂತ ಕಾಣುತ್ತದೆ. ಇದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಧಾರವಾಡ ಜಿಲ್ಲೆಯಲ್ಲಿ ಕೋಳಿವಾಡ್ ಅನ್ನುವ ಸ್ಥಳ ಇದೆ. ಆ ಪ್ರದೇಶ ಕುಮಾರವ್ಯಾಸನ ಹುಟ್ಟೂರಾದ್ದರಿಂದ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕವಿವರ್ಯರುಗಳ ಪರಂಪರೆಗಳಲ್ಲಿ ಹುಟ್ಟಿದಂಥ ಊರುಗಳನ್ನು ಅಭಿವೃದ್ಧಿಮಾಡುವುದು, ಆ ಕೆಲಸಗಳು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟದ್ದು. ಆದುದರಿಂದ ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಗೋಪೀನಾಥ್ ಆರ್. ಕಾಂದ್ರ.—ಧಾರವಾಡ ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳಿಗೆಂದು ಎಷ್ಟು ಹಣ ಒದಗಿಸಿದ್ದೀರೋ ಅದರಲ್ಲಿ ಇನ್ನೂ ಸ್ವಲ್ಪ ಹಣ ಜಿಲ್ಲಾ ಅಧಿಕಾರಿಗಳ ಹತ್ತಿರ ಇದೆ. ಆದುದರಿಂದ ಕೋಳಿವಾಡ್, ಮುಂಡಗಿ, ರೋಣ್ ಈ ಸ್ಥಳಗಳಲ್ಲಿ ಆ ಹಣವನ್ನು ಉಪಯೋಗ ಮಾಡುವುದಕ್ಕೆ ಅಪ್ಪಣೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವಶ್ಯಕತೆ ಇದ್ದರೆ ಆಲೋಚನೆ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ದೇಶದಲ್ಲಿ ಕ್ಷಾಮ ಪರಿಹಾರಕ್ಕೆಂದು ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೀರಿ. ಅದರಲ್ಲಿ ಕೆಲಸಗಳು ಅರ್ಧಮರ್ಧವಾಗಿ ನಿಂತಿವೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು ತಮ್ಮ ವಶಕ್ಕೆ ಈ ರಸ್ತೆಗಳನ್ನು ತೆಗೆದುಕೊಳ್ಳುವಾಗ ಹಿಂದೆ ಕ್ಷಾಮ ಪರಿಹಾರ ನಿಧಿಯಿಂದ ಮಾಡಿದಂಥ ಕೆಲಸಗಳನ್ನೂ ಕೂಡ ಅವರ ವಶಕ್ಕೆ ತೆಗೆದುಕೊಂಡು ಅಪೂರ್ಣವಾಗಿರುವ ಕೆಲಸಗಳನ್ನು ಪೂರ್ಣಗೊಳಿಸುವಂತೆ ಏರ್ಪಾಡು ಮಾಡುವುದು ಉತ್ತಮವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಕೆಲಸ ಕ್ಷಾಮ ಪರಿಹಾರ ನಿಧಿಯಿಂದ ತೆಗೆದುಕೊಂಡಂಥಾ ರಸ್ತೆಗಳೇ ಆಗಲಿ, ತಾಲ್ಲೂಕು ಬೋರ್ಡ್‌ನಿಂದ ತೆಗೆದುಕೊಂಡಂಥ ರಸ್ತೆಗಳೇ ಆಗಲಿ ಅಥವಾ ಕಮ್ಯೂನಿಕೇಷನ್ ಪ್ರೋಗ್ರಾಂನಿಂದ ಮಾಡಿಸಿದಂಥ ರಸ್ತೆಗಳೇ ಆಗಲಿ, ಯಾವ ರೀತಿಯಾದ ರಸ್ತೆಗಳೇ ಆಗಲಿ ಅದರ ಪ್ರಾಮುಖ್ಯತೆಯನ್ನು ತಿಳಿದುಕೊಂಡು ಅದಕ್ಕೆ ತಕ್ಕಂಥ ಪರಿಹಾರವನ್ನು ಒದಗಿಸುತ್ತೇವೆ ಎಂದು ಮಾನ್ಯ ರೋಕೋಪಯೋಗಿ ಮಂತ್ರಿಗಳು ಹೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.